Date : 18-9-2015

## ಮಲೇಶ್ಯಾದ ಪಾಮೆಣ್ಣೆ ರಫ್ತು ಸಪ್ಟೆಂಬರ್ 1–15ರ ತನಕ ಮಾಸಿಕ ನೆಲೆಯಿಂದ 6.9 ಶೇಕಾಡ ಹೆಚ್ಚಳ

ಸಪ್ಟೆಂಬರ್ 1 ರಿಂದ 15, 2015 ರ ವರೆಗಿನ ಮಲೇಶ್ಯಾದ ಪಾಮೆಣ್ಣೆ ರಫ್ತು 6.9 ಶೇಕಡಾ ಹೆಚ್ಚಳವಾಗಿದೆ. ಅದು ಆಗಸ್ಟ್ ತಿಂಗಳ ಇದೆ ಅವಧಿಯಲ್ಲಿದ್ದ 715922 ಟನ್‌ಗಳಿಂದ 765,322 ಟನ್‌ಗಳಿಗೆ ಹೆಚ್ಚಳವಾಗಿದೆ ಎಂದು ಕಾರ್ಗೋ ಸರ್ವೆಯರ್ ಇಂಟರ್‌ಟೆಕೆ ಟೆಸ್ಟಿಂಗ್ ಸರ್ವಿಸಸ್ ಹೇಳಿದೆ. ಮಲೇಶ್ಯಾ ಸರಕಾರದ ಸರ್ಕ್ಯುಲರ್ ಪ್ರಕಾರ ಅಕ್ಟೋಬರ್ ತಿಂಗಳಲ್ಲೂ ಕ್ರೂಡ್ ಪಾಮೆಣ್ಣೆಯ ರಫ್ತಿನ ಮೇಲೆ ಶೂನ್ಯಕರ ಮುಂದುವರಿಯಲಿದೆ. ರಫ್ತು ಬೇಡಿಕೆಗಿಂತ ವೇಗವಾಗಿ ಉತ್ಪಾದನೆ ಹೆಚ್ಚು ಗೊಂಡಿದ್ದರಿಂದ ಮಲೇಶ್ಯಾದ ಹಿಂದಿನ ತಿಂಗಳ ಪಾಮೆಣ್ಣೆ ದಾಸ್ತಾನು ಹೆಚ್ಚಳವಿರಬಹುದೆನ್ನಲಾಗಿದೆ.

## ಭಾರತದ ಸೋಯಾಬೀನ್ ಎಣ್ಣೆ ಆಮದು ಆಗಸ್ಟ್ ತಿಂಗಳಲ್ಲಿ 4.06 ಲಕ್ಷ ಟನ್‌ಗಳಾಗಿ ಸರ್ವಕಾಲಿಕ ಹೆಚ್ಚಳ

ಭಾರತದ ಸೋಯಾಬೀನ್ ಎಣ್ಣೆ ಆಮದು 2015 ಆಗಸ್ಟ್‌ನಲ್ಲಿ ಸರ್ವಕಾಲಿಕ ಹೆಚ್ಚಳ ದಾಖಲಿಸಿ 4.06 ಲಕ್ಷಟನ್‌ಗಳಿಗೆ ಮುಟ್ಟಿದೆ. 2015ರ ಒಟ್ಟು ಸಸ್ಯಜನ್ಯ ಖಾದ್ಯತೈಲ ಶಿಪ್‌ಮೆಂಟ್ 3 ಶೇಕಡಾ ಹೆಚ್ಚಳವಾಗಿ 13.74 ಲಕ್ಷ ಟನ್‌ಗಳಾಗಿವೆಯೆಂದ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ಹೇಳಿದೆ. ನವೆಂಬರ್ 2014 ರಿಂದ ಆಗಸ್ಟ್ 2015ರ ತನಕದ ಸಸ್ಯಜನ್ಯ ತೈಲ ಆಮದು 23 ಶೇಕಾಡ ಹೆಚ್ಚಳವಾಗಿ ಹಿಂದಿನ ವರ್ಷದ ಇದೇ ಅವಧಿಯಲ್ಲಿದ್ದ 95.25ಲಕ್ಷ ಟನ್‌ಗಳಿಂದ 117.25ಲಕ್ಷ ಟನ್‌ಗಳಿಗೆ ಹೆಚ್ಚಳವಾಗಿದೆಯೆನ್ನಲಾಗಿದೆ.

## ಮೇ 2015 ರಿಂದೀಚೆ ಸೂರ್ಯಕಾಂತಿ ಎಣ್ಣೆ ದರ 15 ಶೇಕಡಾ ಇಳಿಕೆ.

ಹಿಂದಿನೆರಡು ತಿಂಗಳಲ್ಲಿ ಕಪ್ಪು ಸಮುದ್ರ ಪ್ರದೇಶದ ಸೂರ್ಯಕಾಂತಿ ಎಣ್ಣೆ ದರ 15 ಶೇಕಡಾ ಇಳಿಕೆಯಾಗಿದೆ. ಸೂರ್ಯಕಾಂತಿ ಎಣ್ಣೆಬೀಜ 2015ರ ಮೇ ತಿಂಗಳಿಂದಿಚೆ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ. ಜಾಗತಿಕ ಸಸ್ಯಜನ್ಯ ತೈಲ ಮಾರುಕಟ್ಟೆಯ ಸಾಮಾನ್ಯ ದುರ್ಬಲತೆ, ಸೋಯಾಬಿನ್‌ನ ವಿಫುಲ ಜಾಗತಿಕ ಪೂರೈಕೆ ಸೂರ್ಯಕಾಂತಿ ಎಣ್ಣೆ ದರದ ಮೇಲೆ ಪ್ರಭಾವ ಬೀರಿದೆ. 2015–16ರ ಸೀಜನ್‌ನಲ್ಲಿ ಯು.ಎಸ್‌ನ ಸೋಯಾಬೀನ್ ದಾಸ್ತಾನು ಹೆಚ್ಚಳ ನಿರೀಕ್ಷಿಸಲಾಗಿದ್ದು 2005–06 ಸಾಲಿನ ನಂತರದ ಅತೀ ಹೆಚ್ಚಳ ದಾಸ್ತಾನು ಹೊಂದುವ ನಿರೀಕ್ಷೆಯಿದೆಯೆನ್ನಲಾಗಿದೆ. ಆ ವರ್ಷ ದಕ್ಷಿಣ ಅಮೆರಿಕಾದ ಪ್ರಬಲ ಸ್ಪರ್ಧೆಯಿಂದ ಯು.ಎಸ್.ನ ಸೋಯಾಬಿನ್ ರಫ್ತು ಹಿನ್ನೆಡೆ ಕಂಡಿತ್ತು. ಪ್ರಸಕ್ತ ಬೆಳೆ ವರ್ಷದಲ್ಲೂ ದಕ್ಷಿಣ ಅಮೆರಿಕಾದ ಸೋಯಾಬೀನ್ ಹೊಸಬೆಳೆಯ ಸರಬರಾಜು ಜಾಗತಿಕ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬರುವ ನಿರೀಕ್ಷೆಯಿದೆ. ಸೋಯಾಬೀನ್‌ನ ವಿಫುಲ ಪೂರೈಕೆಯಿಂದ ಯು.ಎಸ್. ಸೋಯಾಬೀನ್ ದರ 2014/15 ಸಪ್ಟೆಂಬರ್–ಆಗಸ್ಟ್ ಅವಧಿಯಲ್ಲಿ 22 ಶೇಕಡಾ ಇಳಿಕೆ ಹೊಂದಿದೆ. ಈಗ ದರ 2008 ಡಿಸೆಂಬರ್ ನಂತರದಲ್ಲಿ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ.